ರಾಜೇಶ್ವರಿ, ಪುತ್ತೂರು
ಗಂಡು ತಾನು ಮಾಡ್ರನ್ನಾಗಿದ್ದು ಹೆಣ್ಣು ಬಳೆ, ಸೀರೆ, ಕುಂಕುಮ ತೊಡಬೇಕೆನ್ನುವನಲ್ಲಾ, ಸಂಸ್ಕೃತಿ ಹೆಣ್ಣಿಗೆ ಮಾತ್ರವೇನು?



ಅದೆಲ್ಲ ಬಾಯ್ಮಾತಿಗೆ. ಅವನ ಕಣ್ಣು ಅರಸುವುದು ಟೋರ್ನ್, ಫೇಡೆಡ್ಡು ಸ್ಟೈಲ್‌ವಾಲಿಗಳನ್ನೇ.

ಹರಿತಸ, ಬೆಂಗಳೂರು
ಪ್ರತಿ ಯಶಸ್ವಿ ಪುರುಷನ ಹಿಂದೆ ಒಬ್ಬಳು ಹೆಣ್ಣಿರುವಳಂತೆ. ಯಶಸ್ವಿ ಮಕ್ಕಳ ಹಿಂದೆ?
ಹಲವಾರು 'ಸರ್'ಗಳು, 'ಮಿಸ್'ಗಳು.

ಬಿ. ಚಂದ್ರೇಗೌಡ, ಬೆಂಗಳೂರು
ದ್ರೌಪದಿಯ ಶಪಥಕ್ಕೂ, ರಾಜಕಾರಣಿಯ ಶಪಥಕ್ಕೂ ಏನು ವ್ಯತ್ಯಾಸ?
ಅವಳದು ಶಪಥ; ಇವನದು ಕೇವಲ ಶತಪಥ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಪುರಾಣಕಾಲದಲ್ಲಿ ನಾರದ ಜಗಳ ಹಚ್ಚುವ ಕೆಲಸ ಮಾಡುತ್ತಿದ್ದನಂತೆ. ಇಂದಿನ ಯುಗದಲ್ಲಿ?



ಜಗಳವಷ್ಟೇ ಅಲ್ಲ, ಕಿಚ್ಚನ್ನೇ ಹಚ್ಚುವ, ಕುಯುಕ್ತಿಯಿಂದ ನಾರುವ ವ್ಯಕ್ತಿಗಳ ದಂಡುಗಳೇ ಇವೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ರಾಜ್ಯದಲ್ಲಿ ಕನ್ನಡ ಶಾಲೆಗಳೇ ಮುಚ್ಚುವ ಸ್ಥಿತಿಯಲ್ಲಿರುವಾಗ ಸಂಸ್ಕೃತ ವಿಶ್ವವಿದ್ಯಾಲಯದ ಅವಶ್ಯಕತೆ ಇದೆಯೆ?
ಅಮ್ಮ ಅಸ್ವಸ್ಥಳಾದಳೆಂದು ಅಜ್ಜಿಯನ್ನು ಹೊರಗಟ್ಟಬೇಕೆ? ಅವಳಿಗೆ ಪುಷ್ಟಿ ನೀಡಿ, ಇವಳನ್ನೂ ಉಳಿಸಿಕೊಳ್ಳಿ.

ಅಂಚೆ ಸುಬ್ರಹ್ಮಣ್ಯ
ಮಾನವನಿಗೆ ಒಂದು ಕಣ್ಣನ್ನು ಮುಂದೆ, ಇನ್ನೊಂದನ್ನು ಹಿಂದೆ ಕೊಟ್ಟಿದ್ದರೆ ಪರಿಣಾಮ ಏನಾಗುತ್ತಿತ್ತು?
ಹುಡುಗಿಯನ್ನು ಫಾಲೊ ಮಾಡುವುದು ಕಷ್ಟವಾಗುತ್ತಿತ್ತು.

ರತ್ನಜ, ಮೈಸೂರು
ಜೋಕ್ ಅನ್ನು ಕಟ್ ಮಾಡು ಎಂದೇಕೆ ಹೇಳುತ್ತಾರೆ?
ಕಟ್ ಮಾಡದೆ ಲಂಬಿಸಿದರೆ ಪಂಚ್ ಇರುವುದಿಲ್ಲ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಮೊದಮೊದಲು ಸತ್ಯ ಕಹಿ ಎನಿಸುತ್ತದೆ, ಸುಳ್ಳು ಮಧುರವೆನಿಸುತ್ತದೆ. ಏಕೆ?
ಬೆಳಕಿನಲ್ಲೂ ದೀಪವಾಗಬಲ್ಲ ಹಣತೆಗಿಂತ ಇರುಳಲ್ಲಿನ ಮಿಣುಕುಹುಳ ಆಕರ್ಷಕ. ಇದೂ ಹಾಗೇ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಸಮುದ್ರ ಎಲ್ಲ ನದಿಗಳ ನೀರನ್ನು ತನ್ನೊಳಗೆ ಅಡಗಿಸಿಕೊಳ್ಳುತ್ತಿದೆಯಲ್ಲಾ?
ಚಿಂತೆಯಿಲ್ಲ. ಅದಕ್ಕೆ ತಿಳಿಯದಂತೆ ದಿನವೂ ನೀರನ್ನೊಯ್ದು ಮೋಡಗಳಲ್ಲಿರಿಸಲು ಸೂರ್ಯನನ್ನು ನಿಯಮಿಸಿದ್ದೇವೆ.

ಜಗದೀಶ ಬಿ. ಹೊಸೂರು, ಮೈಸೂರು
ನಿಯಮವನ್ನೇ ತಿಳಿಸದೆ ಉಲ್ಲಂಘನೆಯ ನೋಟೀಸ್ ನೀಡುವವರನ್ನು ಏನೆನ್ನಬೇಕು?
ಏನಾದರೂ ಅಂದರೆ ಕಂಟೆಂಪ್ಟ್ ಕೇಸ್ ಆದೀತು. ನೋಟೀಸಿಗೆ ಉತ್ತರಿಸಬೇಕಷ್ಟೆ.

ರಾಜೀವ ಎನ್. ಮಾಗಲ್, ಸಕಲೇಶಪುರ
ವಿಧಾನ ಸಭೆಯ ಅಧಿವೇಶನವನ್ನು ಫ್ರೀಡಮ್ ಪಾರ್ಕ್‌ನಲ್ಲಿ ಆಯೋಜಿಸಿದರೆ?
ಹಾಲಿ ಮಂತ್ರಿಗಳಾದ ಮಾಜಿ ಕೈದಿಗಳಿಗೆ ತವರಿಗೆ ಬಂದಂತೆ ಅನ್ನಿಸೀತು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಬದುಕು ಪೂರ್ವನಿರ್ಧಾರಿತ; ವಿಧಿಯ ಕೈಗೊಂಬೆಗಳಾದ ನಮ್ಮ ಕೈಯಲ್ಲಿ ಏನೂ ಇಲ್ಲ ಅಲ್ಲವೆ ಸರ್?
ಎಷ್ಟೋ ಜನರದು ಪಶ್ಚಿಮ ನಿರ್ಧಾರಿತ ಪಾಶ್ಚಿಮಾತ್ಯ ದೇಶಗಳಿಗೆ ತಕ್ಕಂತೆಯೇ ಅವರ ಜೀವನ.

## ವಾರದ ಪ್ರಶ್ನೆ

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಬಾಗಿಲಿಗೆ ಹಾಕುವ ಬೀಗದ ಕೈಗೂ, ಮೊಬೈಲ್, ಇ– ಮೇಲ್‌ಗಳ ಪಾಸ್‌ವರ್ಡ್‌ಗೂ ವ್ಯತ್ಯಾಸವೇನು?
ಬೀಗದ ಕೈ ಪತಿವ್ರತೆ; ಒಂದು ಬೀಗಕ್ಕೆ ಜೀವಮಾನವಿಡೀ ಒಂದೇ ಕೈ.

ಅನಸೂಯ ಟಿ, ಕೇದಿಗೆಮನೆ
ಬಟ್ಟೆಯ ಕೊಳೆ ತೆಗೆಯಲು ಸೋಪಿನ ಪುಡಿ. ಮನಸ್ಸಿನ ಕೊಳೆ ತೆಗೆಯಲು?
ಸಜ್ಜನರ ಸಂಗವೇ ಎಕ್ಸಲೆಂಟ್.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಹೆಂಡತಿ ಕೇಳುವ ಪ್ರಶ್ನೆಗಳು ಕಠಿಣವಾಗಿರುತ್ತವೆ. ಏಕೆ?
ಅವೆಲ್ಲ ಔಟ್ ಆಫ್ ಸಿಲಬಸ್ ಆಗಿರುತ್ತವಾದ್ದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಬಾರ್‌ನಲ್ಲೇಕೆ ಕತ್ತಲು, ಗುಡಿಯಲ್ಲೇಕೆ ಬೆಳಕು?



ಅಲ್ಲಿಗಲ್ಲಿಗೆ ಹೋಗುವುದರಿಂದ ಜೀವನ ಎತ್ತ ಸಾಗುತ್ತದೆಂದು ಸೂಚಿಸಲು.

ಬಿ.ಎಸ್. ನಾರಾಯಣಸ್ವಾಮಿ, ಬಿ.ಹೊಸಹಳ್ಳಿ
ದೇಶಕ್ಕಾಗಿ ಮಡಿದವ ಹುತಾತ್ಮ; ದೇಶಕ್ಕಾಗಿ ಬದುಕಿ ಸತ್ತವ ಪರಮಾತ್ಮ. ಪ್ರೀತಿಗಾಗಿ ಪ್ರಾಣ ತೆತ್ತವ?
ಪ್ರೇತಾತ್ಮ.

ಮಹಾವೀರ ಕಾಸರ, ಶಿವಮೊಗ್ಗ
ಕಚ್ಚೆಪಂಚೆಗಳ ಬದಲಿಗೆ ಪ್ಯಾಂಟು, ಪೈಜಾಮಗಳು ಬಂದಿರುವಾಗ 'ಕಚ್ಚೆಹರುಕ' ಎಂಬ ಪದಕ್ಕೆ ಅರ್ಥವೆಲ್ಲಿದೆ?
ಹಿಂದಿಯಲ್ಲಿ ಕಚ್ಚೆ ಅರ್ಥಾತ್ ಅಪಕ್ವವಾದುದನ್ನೂ ಹ(ಹು)ರಿದು ಮುಕ್ಕುವವನೆಂದು.

■ ರಾಮ್